**ಕನ್ನಡದ ಬಹುತೇಕ ಲೇಖಕರು ಸಾಹಿತ್ಯದ ಆಶಯಗಳ ಮುಂದುವರಿಕೆಯಾಗಿ ಸಿನಿಮಾ ಮಾಧ್ಯಮವನ್ನು ಬಳಸಿಕೊಂಡಿದ್ದಾರೆ. ನಿಮ್ಮ ಪಾಲಿಗೆ ಸಿನಿಮಾ ಮಾಧ್ಯಮ ಒದಗಿಬಂದಿರುವುದು ಹೇಗೆ?**

'ನೀವು ಬಹಳ ಕೆಟ್ಟ ನಿರ್ದೇಶಕರು' ಎಂದು ಲಂಕೇಶರಿಗೆ ಒಮ್ಮೆ ಹೇಳಿದ್ದೆ. 'ನಿನಗೆ ಗೊತ್ತಾಗಲ್ಲ. ಏನೆಲ್ಲ ಕಷ್ಟಗಳ ನಡುವೆ ನಾವು ಸಿನಿಮಾ ಮಾಡೋದೆ ಹೆಚ್ಚು' ಎಂದು ಅವರು ಹೇಳಿದ್ದರು. ಸಾಹಿತ್ಯದ ಕಣ್ಣಿನಿಂದ ಸಿನಿಮಾ ಮಾಡುವ ಚೌಕಟ್ಟನ್ನು ನಮ್ಮ ಬಹುತೇಕ ಲೇಖಕರು ಮೀರಲಿಲ್ಲ. ನನ್ನ ಅನುಭವದಂತೆ, ಅನೇಕ ಸಾಹಿತಿಗಳಿಗೆ ಸಿನಿಮಾ ಬಗ್ಗೆ ಗುಪ್ತಪ್ರೀತಿ ಇರುತ್ತದೆ; ಜೊತೆಗೆ ಅಸ್ಪೃಶ್ಯ ಮನೋಭಾವವೂ ಇರುತ್ತದೆ. ಅವಕಾಶ ಕೊಟ್ಟರೆ ಶ್ರದ್ಧೆಯಿಂದ ಬರೆಯುವುದಿಲ್ಲ. ಸಿನಿಮಾಕ್ಕೆ ಕೆಲಸ ಮಾಡುವುದು ಒಂದು ಕವಿತೆಯನ್ನೋ ಕಥೆಯನ್ನೋ ಬರೆದಂತಲ್ಲ. ವೈಯಕ್ತಿಕವಾಗಿ ಸಿನಿಮಾದಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ. ಅದೊಂದು ಸಮೂಹಕಲೆ. ಸಾಹಿತ್ಯದ ಸ್ಪರ್ಶವನ್ನು ಉಳಿಸಿಕೊಂಡೂ ಸಿನಿಮಾ ಮಾಡಲು ಸಾಧ್ಯವಿದೆ. ಕಮರ್ಷಿಯಲ್ ಸಕ್ಸಸ್ ಬಗ್ಗೆ ಮುಜುಗರ ಪಡಬೇಕಿಲ್ಲ. ನನ್ನ 'ಅಮೆರಿಕ ಅಮೆರಿಕ' ಒಂದು ವರ್ಷ ಓಡಿತು. ಸಾಹಿತ್ಯದ ಹಿನ್ನೆಲೆಯಿಂದ ಬಂದ ಕಾರಣದಿಂದಲೋ ಏನೋ ಜನ ಬಹಳಷ್ಟು ಪ್ರೀತಿ–ಯಶಸ್ಸು ಕೊಟ್ಟಿದ್ದಾರೆ. ಆ ಕಾರಣದಿಂದಲೇ ಮೂರೂವರೆ ದಶಕಗಳ ಕಾಲ ದೃಶ್ಯಮಾಧ್ಯಮದಲ್ಲಿ ಕೆಲಸ ಮಾಡಲು ಸಾಧ್ಯವಾಯಿತು.

● **ಯಶಸ್ಸುಗಳ ನಡುವೆಯೂ ನೀವು ಅನೇಕ ಸಿನಿಮಾಗಳಲ್ಲಿ ರಾಜಿ ಮಾಡಿಕೊಂಡಂತೆ ಕಾಣಿಸುತ್ತದೆ. ಈ ನಿಟ್ಟಿನಲ್ಲಿ 'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರವನ್ನು ಉದಾಹರಣೆ ಕೊಡಬಹುದೆನ್ನಿಸುತ್ತದೆ?**

ಮಾರುಕಟ್ಟೆ ಬಗ್ಗೆ ನಮಗಿರುವ ಭಯ ರಾಜಿಗೆ ಕಾರಣವಾಗುತ್ತದೆ. ವಿಷ್ಣುವರ್ಧನ್ ಇದ್ದಾಗ, ಸುದೀಪ್ ಬಂದಾಗ, ಮಾರುಕಟ್ಟೆಯ ಸೂತ್ರಗಳು ನಮ್ಮನ್ನು ಜಗ್ಗುತ್ತವೆ. ಸಿನಿಮಾದಲ್ಲಿ ವ್ಯಾಪಾರ ಮತ್ತು ಕಲೆಯ ಪ್ರಮಾಣ ಎಷ್ಟಿರಬೇಕೆನ್ನುವ ಜಿಜ್ಞಾಸೆ ಶುರುವಾಗುತ್ತದೆ. 'ಮಾತಾಡ್ ಮಾತಾಡ್ ಮಲ್ಲಿಗೆ' ಸಿನಿಮಾಕ್ಕಾಗಿ ನಾನು ಸಾಕಷ್ಟು ಅಧ್ಯಯನ ನಡೆಸಿದ್ದೆ. ಪುಷ್ಪಕೃಷಿ, ನಕ್ಸಲಿಸಂ, ಗಣಿಗಾರಿಕೆ – ಎಲ್ಲದರ ಬಗ್ಗೆಯೂ ಓದಿಕೊಂಡಿದ್ದೆ. ಆದರೆ, ಇದೆಲ್ಲವೂ ಸಿನಿಮಾದಲ್ಲಿ ಪ್ರತಿಫಲಿತವಾಗಲು ಸಾಧ್ಯವಾಗಲಿಲ್ಲ. ಸಿನಿಮಾಕ್ಕಿರುವ ವ್ಯಾವಹಾರಿಕ ಜೂಜಿನ ಒತ್ತಡ ಇದು. ಸೂಕ್ಷ್ಮಮನಸ್ಸಿನ ವ್ಯಕ್ತಿಗಳನ್ನು ಇದು ಹಣ್ಣಾಗಿಸುತ್ತದೆ. ನಟ ವಿಷ್ಣುವರ್ಧನ್ ಅವರ ಆರೋಗ್ಯ ಕೂಡ ಕ್ಷೀಣಿಸಿತ್ತು. ತೆರೆಯ ಹಿಂದಿನ ಪರದಾಟಗಳಿಂದಾಗಿ ರಾಜಿ ಮಾಡಿಕೊಳ್ಳಬೇಕಾಯಿತು.

ಈಗ, ಸಿನಿಮಾ ಎನ್ನುವುದು ಎಂದೂ ತುದಿಮುಟ್ಟದ ಪರ್ವತಾರೋಹಣ ಎನ್ನಿಸುತ್ತಿದೆ. ಶಿಖರ ಎಲ್ಲಿಯೋ ಇದೆ ಎನ್ನುವುದಷ್ಟೇ ಗೊತ್ತು.

● **ಮೇಷ್ಟ್ರು, ಕಥೆಗಾರ, ಸಿನಿಮಾ ನಿರ್ದೇಶಕ – ಈ ಮೂರರಲ್ಲಿ ನಿಮಗೆ ಯಾವುದು ತುಂಬಾ ಇಷ್ಟ? ಏಕೆ?**

ಮೊದಲೆರಡು ತುಂಬಾ ಖುಷಿಕೊಟ್ಟ ಪಾತ್ರಗಳು. ಈಗಲೂ ಕೆಲವೊಮ್ಮೆ ಗಂಗೋತ್ರಿಗೆ ಹೋಗಿ ಪಾಠ ಮಾಡಿ, ಸಂಜೆ ನಾಗತಿಹಳ್ಳಿಗೆ ಹೋಗಿ ಪ್ರಾಥಮಿಕ ಶಾಲೆ ಮಕ್ಕಳಿಗೆ ಪಾಠ